ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/12/ಎಲ್‌ಆರ್‌ಡಿಸಿ/2018-19 /2987

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 11-02-2019.

## -:ಜ್ಞಾಪ ನ:-

ವಿಷಯ: 2018-19 ನೇ ಸಾಲಿನ ಎರಡನೇ "ಅಖಿಲ ಭಾರತ ದಕ್ಷಿಣ ಪ್ರಾಂತ್ಯ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟಕ್ಕೆ ರಾಜ್ಯದ ಪಾಲಿಟೆಕ್ನಿಕ್ ವಿದ್ಯಾರ್ಥಿಗಳನ್ನು ನಿಯೋಜಿಸುವ ಕುರಿತು.

ಉಲ್ಲೇಖ: 1. ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ತಮಿಳುನಾಡು ಸರ್ಕಾರ, ಚನ್ನೈ ಇವರ ಪತ್ರದ ಸಂಖ್ಯೆ:44548/ಎಹ್-4/2018 ದಿನಾಂಕ: 30.01.2019.

2. ಪ್ರಾಂಶುಪಾಲರು, ಕೋನಗುಂಡು ಪಾಲಿಟೆಕ್ನಿಕ್, ನಮಕಾಲ್, ತಮಿಳುನಾಡು ಇವರ ಪತ್ರದ ಸಂಖ್ಯೆ:KNPTC/SOUTH/01/2018-19 Dt:07.02.2019

3. ದಿನಾಂಕ:25.10.2018 ರಂದು ನಿರ್ದೇಶಕರ ಕೊಠಡಿಯಲ್ಲಿ ನಡೆದ "ಕೇಂದ್ರ ಕ್ರೀಡಾ ಸಮಿತಿ" ಸಭೆಯ ನಡವಳಿಗಳು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರಲ್ಲಿ ಪ್ರಾಂಶುಪಾಲರು, ಕೋನಗುಂಡು ಪಾಲಿಟೆಕ್ನಿಕ್, ನಮಕಾಲ್, ತಮಿಳುನಾಡು ಇವರು 2018-19ನೇ ಸಾಲಿನ ಎರಡನೇ "ಅಖಿಲ ಭಾರತ ದಕ್ಷಿಣ ಪ್ರಾಂತ್ಯ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟವನ್ನು ಮಾರ್ಚ 2019ರ 8 ಮತ್ತು 9 ರಂದು ಕೋನಗುಂಡು ಪಾಲಿಟೆಕ್ನಿಕ್, ನಮಕಾಲ್, ಇಲ್ಲಿ ಆಯೋಜಿಸಲಾಗುತ್ತಿದ್ದು, ಸದರಿ ಕ್ರೀಡಾಕೂಟಕ್ಕೆ ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ವಿದ್ಯಾರ್ಥಿಗಳನ್ನು ನಿಯೋಜಿಸಲು ಕೋರಿರುತ್ತಾರೆ.

ದಿನಾಂಕ: 02-02-2019 ಮತ್ತು 03-02-2019 ರಂದು ಶ್ರೀಮತಿ (ಸರ್ಕಾರಿ) ಎಲ್. ವಿ. ಪಾಲಿಟೆಕ್ನಿಕ್, ಹಾಸನ, ಇಲ್ಲಿ ನಡೆದ "42ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಗಳಿಸಿದ ಕ್ರೀಡಾ ಪಟುಗಳನ್ನು ಎರಡನೇ "ಅಖಿಲ ಭಾರತ ದಕ್ಷಿಣ ಪ್ರಾಂತ್ಯ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟಕ್ಕೆ ನಿಯೋಜಿಸುವ ಸಂಬಂಧ ಕ್ರೀಡಾ ಪಟುಗಳನ್ನು ಆಯ್ಕೆ ಮಾಡಲು ಮತ್ತು ಇತರೆ ರೂಪುರೇಷೆಗಳನ್ನು ತಯಾರಿಸಲು **ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.**

| ಕ್ರ ಸಂ | ಅಧಿಕಾರಿಗಳ ವಿವರ | ಷರಾ |
|---|---|---|
| 1 | ಶ್ರೀ ಶಿವಪ್ರಸಾದ ರೈ ಎನ್, ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು. | ಅಧ್ಯಕ್ಷರು |
| 2 | ಶ್ರೀ ಮುರಳೀಧರಶರ್ಮ, ದೈಹಿಕ ಶಿಕ್ಷಣ ಶಿಕ್ಷಕರು, ಎನ್ ಆರ್ ಎ ಎಂ ಪಾಲಿಟೆಕ್ನಿಕ್, ನಿಟ್ಟೆ. | ಸದಸ್ಯರು |
| 3 | ಶ್ರೀ ಸುಬೋಧ್ ಶಡಂಬ, ದೈಹಿಕ ಶಿಕ್ಷಣ ಶಿಕ್ಷಕರು, ಟಿ ಎಂ ಎ ಖಾಸಗಿ ಪಾಲಿಟೆಕ್ನಿಕ್, ಮಣಿಪಾಲ. | ಸದಸ್ಯರು |
| 4 | ಶ್ರೀ ನವೀನ್‌ಕುಮಾರ್ ಎಂ ಕೆ, ದೈಹಿಕ ಶಿಕ್ಷಣ ಶಿಕ್ಷಕರು, ವಿವೇಕನಂದ ಪಾಲಿಟೆಕ್ನಿಕ್, ಪುತ್ತೂರು | ಸದಸ್ಯರು |
| 5 | ಶ್ರೀಮತಿ ಕಮಲಾಕ್ಷಿ, ವಿಭಾಗಾಧಿಕಾರಿಗಳು, ಸಿಪಿ ವಿಭಾಗ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು | ಸದಸ್ಯರು |

ಮೇಲ್ಕಂಡ ಸಮಿತಿಯ ಸದಸ್ಯರುಗಳು ಸಭೆಸೇರಿ ಕ್ರೀಡಾ ಪಟುಗಳನ್ನು ಎರಡನೇ "ಅಖಿಲ ಭಾರತ ದಕ್ಷಿಣ ಪ್ರಾಂತ್ಯ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟಕ್ಕೆ ನಿಯೋಜಿಸುವ ಸಂಬಂಧ ಕ್ರೀಡಾ ಪಟುಗಳನ್ನು ಆಯ್ಕೆ ಮಾಡುವುದು ಮತ್ತು ಇತರೆ ರೂಪುರೇಷೆಗಳನ್ನು ಸಿದ್ದಪಡಿಸಿ, ಕೂಡಲೇ ನಿರ್ದೇಶನಾಲಯಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ: ಸಂಬಂಧಪಟ್ಟ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಪ್ರಾಚಾರ್ಯರ ಮುಖಾಂತರ.

ಪ್ರತಿ: 1. ಪ್ರಾಂಶುಪಾಲರು, ಸ. ಮ. ಪಾ, ಮಂಗಳೂರು, ಎನ್‌ಆರ್‌ಎಎಂ ನಿಟ್ಟೆ, ಟಿಎಂಎ ಮಣಿಪಾಲ ಇವರ ಮಾಹಿತಿಗಾಗಿ.

2. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.

3. ಇ- ಆಡಳಿತ ವಿಭಾಗಕ್ಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.